# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 100ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ದಿನಾಂಕ 19-10-2020ರಂದು ಬೆಳಿಗ್ಗೆ 8.45 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1 | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಶ್ರೀ ಆರ್. ಮೂಗೇಶಪ್ಪ<br>ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ,<br>ಕರ್ನಾಟಕ ಸರ್ಕಾರ – ಇವರ ಪರವಾಗಿ | ಸದಸ್ಯರು |
| 3 | ಪ್ರೊ. ಡಿ.ಆನಂದ್ | ಸದಸ್ಯರು |
| 4 | ಡಾ. ಚೈತ್ರ ನಾರಾಯಣ | ಸದಸ್ಯರು |
| 5 | ಶ್ರೀ ಗಪ್ಪಣ್ಣ ಎಂ.ಬಿ. | ಸದಸ್ಯರು |
| 6 | ಶ್ರೀ ಕುಮಾರ | ಸದಸ್ಯರು |
| 7 | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8 | ಶ್ರೀ ದಿನೇಶ್.ಎಂ.ಗಾವಂಕರ್ | ಸದಸ್ಯರು |
| 9 | ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 10 | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 11 | ಶ್ರೀಮತಿ. ಪವಿತ್ರ.ವೈ.ಕೆ | ಸದಸ್ಯರು |
| 12 | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 13 | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 14 | ಪ್ರೊ. ಕೆ.ಎಂ.ಮಹದೇವನ್,<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15 | ಪ್ರೊ. ಟಿ.ಎಸ್.ದೇವರಾಜ,<br>ಹಣಕಾಸು ಅಧಿಕಾರಿಗಳು | ಸದಸ್ಯರು |
| 16 | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

/10/2020

4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಶ್ರೀ ಟಿ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರು.
6. ಡಾ.ಸೈಯದ್ ಕಾರುಖ ಮೊಹಿದ್ದೀನ್, ಸಿಂಡಿಕೇಟ್ ಸದಸ್ಯರು.

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು ಮತ್ತು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 100ನೇ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಮತ್ತು ವಿವಿಧ ಕೋರ್ಸ್‌ಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಿ ಸಿಂಡಿಕೇಟ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

| | |
|---|---|
| **ವಿಷಯ ಸಂಖ್ಯೆ: 1** | ಡಾ. ಸುಧಾ ಎನ್ ಮೂರ್ತಿ, ಅಧ್ಯಕ್ಷರು, ಇನ್ಫೋಸಿಸ್‌ನ ಸಂಸ್ಥಾಪಕರು, ಬೆಂಗಳೂರು ಇವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ವಿಶೇಷ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಸಮರ್ಥನೆಗಾಗಿ. |
| ತೀರ್ಮಾನ | ಕುಲಾಧಿಪತಿಗಳ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಜಿಎಸ್ 4 ಎಂಯುಎಂ 2019 ದಿನಾಂಕ 14-09-2020ರ ಅನ್ವಯ 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಡಾ. ಸುಧಾ ಎನ್ ಮೂರ್ತಿ, ಅಧ್ಯಕ್ಷರು, ಇನ್ಫೋಸಿಸ್‌ನ ಸಂಸ್ಥಾಪಕರು, ಬೆಂಗಳೂರು ಇವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಕುಲಾಧಿಪತಿಗಳು ಅನುಮೋದಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **ವಿಷಯ ಸಂಖ್ಯೆ: 2** | 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ವಿವಿಧ ಪದವಿಗಳನ್ನು 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ಸರ್ವಾನುಮತದಿಂದ ಅನುಮೋದಿಸಿತು. |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರು ಸಹಕರಿಸಬೇಕೆಂದು ಕೋರುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿ ಹಾಗೂ ಅಧ್ಯಕ್ಷರು